ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2 ಕೇಶ್ ಶೀಟ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-14 ಮತ್ತು ನಿಪಿ-15 ಎಂದು, 6 ಹಳೆಯ ಎಕ್ಸರೇ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-16 ಎಂದು, 2 ಹೊಸ ಎಕ್ಸರೇ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-17 ಎಂದು ಗುರುತಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಕೆ.ಎನ್.ಎಸ್ ವಕೀಲರಿಂದಃ-

ಅರ್ಜಿದಾರರು ಅಪಘಾತವಾದ ನಂತರ ನಮ್ಮ ಆಸ್ಪತ್ರೆಯಲ್ಲಿ ಮೊದಲ ಬಾರಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆಸರಿ. ಅವರು ಚಿಕಿತ್ಸ ಪಡೆದುಕೊಂಡು ಬಗ್ಗೆ ಎಂ.ಎಲ್.ಸಿ ರಿಜಿಸ್ಟರ್ ಮಾಡಿಕೊಂಡು ಪೊಲೀಸರಿಗೆ ಮಾಹಿತಿ ಸಹ ನೀಡಿಲಾಗಿರುತ್ತದೆ. ಈ ದಿನ ಹಾಜರುಪಡಿಸಿರುವ ನಿಪಿ-14 ಮತ್ತು ನಿಪಿ-15 ರ ದಾಖಲೆಗಳಲ್ಲಿ ಎಂ.ಎಲ್.ಸಿ ವರದಿ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ ಬಗ್ಗೆ ಇರುವುದಿಲ್ಲ ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಈ ದಿನ ಹಾಜರುಪಡಿಸಿರುವ ದಾಖಲೆಗಳ ಪ್ರಕಾರ 2 ಒಳರೋಗಿ ಕಡತಗಳಾಗಿರುತ್ತವೆ ಎಂದರೆ ಸರಿ. 2ನೇ ಬಾರಿ ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬೋನ್ ಗ್ರಾಫ್ಟಿಂಟಿ ಚಿಕಿತ್ಸೆಗಾಗಿ ಒಳರೋಗಿ ದಾಖಲಾಗಿರುತ್ತಾರೆ. ಅರ್ಜಿದಾರರು 2ನೇ ಬಾರಿ ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ಉಂಟಾಗಿದ್ದ ಗಾಯಗಳು ಗುಣಮುಖವಾಗಿದ್ದವು ಎಂದರೆ ಸರಿಯಲ್ಲ. ಅರ್ಜಿದಾರರು ಮೊದಲು ಬಾರಿ ಆಸ್ಪತ್ರೆಗೆ ದಾಖಲಾಗಿ ಬಿಡುಗಡೆ ಹೊಂದಿ ಪುನಃ 6-7 ತಿಂಗಳ ನಂತರ 2ನೇ ಬಾರಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಅರ್ಜಿದಾರರು ಮೊದಲ ಬಾರಿ ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಮುಂದುವರೆದ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಅದು ಅರ್ಜಿದಾರರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮೊದಲ ಬಾರಿ ಅರ್ಜಿದಾರರರಿಗೆ ಚಿಕಿತ್ಸೆ ನೀಡಿದ ಸಮಯ ಯಾವ ಕಾರಣಕ್ಕಾಗಿ ಮೂಳೆ ಕೂಡಿಕೊಂಡಿರುವುದಿಲ್ಲ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಅರ್ಜಿದಾರರಿಗೆ ಮೂಳೆ ಮುರಿತ ಜಾಸ್ತಿಯಾಗಿದ್ದರಿಂದ ಅದು ಕೂಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ

2ನೇ ಬಾರಿ ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ನಂತರ ಅವರಿಗೆ ಫಿಜಿಯೋ ತೆರಪಿಯನ್ನು ತೆಗೆದುಕೊಳ್ಳಲು ಸೂಚಿಸಲಾಗಿತ್ತು. 2ನೇ ಬಾರಿ ನಮ್ಮ ಆಸ್ಪತ್ರೆಯಿಂದ ಅರ್ಜಿದಾರರು ಬಿಡುಗಡೆಯಾದ 1 ವರ್ಷದ ನಂತರ ನಾನು ಅವರ ಅಂಗ ನ್ಯೂನ್ಯತೆ ಬಗ್ಗೆ ಪರೀಕ್ಷಿಸಿರುತ್ತೇನೆ ಎಂದರೆ ಸರಿ. ಅರ್ಜಿದಾರರು 2ನೇ ಬಾರಿ ಮುಂದುವರೆದ ಚಿಕಿತ್ಸೆಯನ್ನು ಪಡೆದುಕೊಂಡಿರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ

ಸಾಕ್ಷಿ ಅದು ಅರ್ಜಿದಾರರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಡಿಸೆಬಿಲಿಟಿ ಅಸೆಸ್ಮೆಂಟ್ ಪರೀಕ್ಷೆಯ ಸಮಯದಲ್ಲಿ ಅವರಿಗೆ ಎಕ್ಸ ರೇ ತೆಗೆಯಲಾಗಿದ್ದು ಅದರಂತೆ ಅವರಿಗೆ ಉಂಟಾಗಿದ್ದ ಮೂಳೆ ಮುರಿತ ಜೋಡಣೆಯಾಗಿರುತ್ತದೆ ಎಂದರೆ ಸಾಕ್ಷಿ ಅದು ವಕ್ರ ಜೋಡಣೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರದೊಂದಿಗೆ ನೀಡಿರುವ ಡಿಸೆಬಿಲಿಟಿ ಅಸೆಸ್ಮೆಂಟ್ ಪರೀಕ್ಷೆಯ ವರದಿಯಲ್ಲಿ ಹೇಳಿರುವ ಅರ್ಜಿದಾರರ ತೊಂದರೆಗಳು ಅವರಿಗೆ ಅಳವಡಿಸಿರುವ ಇಂಪ್ಲಾಂಟ್ ಗಳನ್ನು ಹೊರತೆಗೆಯದಿರುವ ಕಾರಣ ಆ ರೀತಿ ತೊಂದರೆ ಇರುತ್ತವೆ ಎಂದರೆ ಸಾಕ್ಷಿಯು ಇಂಪ್ಲಾಂಟ್ ಹೊರತೆಗೆದರೂ ಸಹ ಆ ರೀತಿಯ ತೊಂದರೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಮುಂದುವರೆ ಚಿಕಿತ್ಸೆ ಪಡೆದುಕೊಳ್ಳದೇ ಇರುವುದರಿಂದ ಆ ರೀತಿಯ ಎಲ್ಲಾ ತೊಂದರೆ ಆಗಿರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ನಾನು ಹೆಚ್ಚಿನ ಪ್ರಮಾಣದ ಅಂಗ ನ್ಯೂನ್ಯತೆಯ ಅಂಶವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಅರ್ಜಿದಾರಿರಿಗೆ ಅಳವಡಿಸಿರುವ ಇಂಪ್ಲಾಂಟ್ ಅನ್ನು ಹೊರತೆಗೆಯಲು 30 ಸಾವಿರ ಆಗುತ್ತದೆ ಎಂದು ಹೇಳಿದ್ದು ಆ ಬಗ್ಗೆ ನಾನು ಯಾವುದೇ ಅಂದಾಜು ಪಟ್ಟಿಯನ್ನು ನೀಡಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ ಬಿ.ಟಿ)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು